


## ಕಳೆಗುಂದುತ್ತಿರುವ ಸ್ಮಾರಕ

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಮಾವಿನಗುಂಡಿಯಲ್ಲಿ ಸ್ವಾತಂತ್ರ್ಯ ಚಳವಳಿಯ ಭಾಗವಾಗಿ ಕರನಿರಾಕರಣೆಯ ದೊಡ್ಡ ಹೋರಾಟ ನಡೆದಿತ್ತು. ಕರನಿರಾಕರಣೆಯಲ್ಲಿ ಜಪ್ತಾದ ಮಾಲನ್ನು ಮರಳಿ ಕೊಡಿಸಲು ತ್ಯಾಗಲಿ ಭುವನೇಶ್ವರಮ್ಮ, ಕಲ್ಲಾಳ ಲಕ್ಷ್ಮಮ್ಮ, ದೊಡ್ಮನೆ ಮಹಾದೇವಮ್ಮ, ಕುಳಿಬೀಡು ಗಣಪಮ್ಮ, ಹಣಜೀಬೈಲು ದುಗ್ಗಮ್ಮ, ಕುಳೀಬೀಡು ಭಾಗೀರಥಮ್ಮ, ಕಲ್ಲಾಳ ಕಾವೇರಮ್ಮ, ಹೊಸಕೊಪ್ಪ ಸೀತಮ್ಮ, ಗುಂಜಗೋಡ ಮಾದೇವಮ್ಮ, ಹೆಗ್ಗಾರ ದೇವಮ್ಮ ಮೊದಲಾದವರು ಅನೇಕ ದಿನಗಳ ಕಾಲ ಉಪವಾಸ ಸತ್ಯಾಗ್ರಹ ನಡೆಸಿದ್ದರು. ಆ ಸ್ಮರಣೆಗಾಗಿ ಹತ್ತು ವರ್ಷಗಳ ಹಿಂದೆ ಸ್ಮಾರಕ ನಿರ್ಮಿಸಲಾಗಿತ್ತು. ಆ ಸ್ಮಾರಕ ಸಮರ್ಪಕ ನಿರ್ವಹಣೆ ಇಲ್ಲದೆ ತನ್ನ ಮೂಲ ಸ್ವರೂಪ ಕಳೆದುಕೊಂಡು ಕಳಾಹೀನವಾಗುತ್ತಿದೆ.

–ಕೆಕ್ಕಾರ ನಾಗರಾಜ ಭಟ್ಟ, ಸಿದ್ದಾಪುರ



## ಪಾಂಡವರ ಗುಂಡು

ಹೊಳಲ್ಕೆರೆ ತಾಲ್ಲೂಕಿನ ಶಿರಾಪನಹಳ್ಳಿ ಗ್ರಾಮದ ಬಳಿಯಿರುವ ಈ ಬೃಹತ್ ಕಲ್ಲುಗಳನ್ನು ಸ್ಥಳೀಯರು ಪಾಂಡವರ ಗುಂಡು ಎನ್ನುತ್ತಾರೆ. ಪಾಂಡವರು ವನವಾಸದಲ್ಲಿ ಇಲ್ಲಿ ವಾಸವಿದ್ದರು ಎಂಬುದು ಐತಿಹ್ಯ. ಭೀಮನು ಇವನ್ನು ಒಲೆ ಮಾಡಿಕೊಂಡು ಅಡುಗೆ ಮಾಡುತ್ತಿದ್ದನಂತೆ! ಒಲೆಯ ಗುಂಡೇ ಇಷ್ಟು ದೊಡ್ಡದಿರಬೇಕಾದರೆ ಮಾಡುವ ಅಡುಗೆಯ ಪ್ರಮಾಣ ಎಷ್ಟಿರಬಹುದು ಊಹಿಸಿ!

ಒಂದರ ಮೇಲೊಂದು ಜೋಡಿಸಿ ಇಟ್ಟಿರುವ ಬೃಹತ್ ಕಲ್ಲುಗಳು. ಮನುಷ್ಯ ಮಾತ್ರರಿಂದ ಜೋಡಿಸಿ ಇಡಲು ಸಾಧ್ಯವಿಲ್ಲ. ನಿಸರ್ಗ ಸೃಷ್ಟಿಯ ವಿಸ್ಮಯ ಇಂದಿಗೂ ಅಲುಗಾಡದಂತೆ ನಿಂತಿರುವುದು ಅಚ್ಚರಿ.

–ಕೆ.ವಿ. ಸಂತೋಷ್ ಹೊಳಲ್ಕೆರೆ

## ದುಡ್ಡಿನ ಮರ!

ರಾಯಚೂರು ನಗರದ ವಿಶ್ವರಥ್ ಚಿಕ್ಕಂದಿನಿಂದಲೇ ನಾಣ್ಯ, ನೋಟುಗಳ ಸಂಗ್ರಹದ ಒಲವು ಬೆಳೆಸಿಕೊಂಡಿದ್ದಾರೆ. ಈ ಹವ್ಯಾಸದ ಮೂಲವೂ ಸ್ವಾರಸ್ಯಕರವಾಗಿದೆ. ಅವರ ತಾತ ಕೆ.ಸಿ. ಈರಣ್ಣ ಕಿರಾಣಿ ಅಂಗಡಿ ನಡೆಸುತ್ತಿದ್ದರು. ತಾತನ ಅಂಗಡಿಗೆ ಹೋದಾಗ ಅವರು ಹುಡುಗನಿಗೆ ಹಣವನ್ನು ಕೊಡುತ್ತಿದ್ದರು. ಅದನ್ನು ಸಂಗ್ರಹಿಸಿ ಇಡುವ ಹವ್ಯಾಸವನ್ನು ಅವರು ರೂಢಿಸಿಕೊಂಡರು. ಈಗ ಅವರ ಬಳಿ ಅಪರೂಪದ ನಾಣ್ಯಗಳ ದೊಡ್ಡ ಸಂಗ್ರಹವೇ ಇದೆ.

ಅವರ ಸಂಗ್ರಹದಲ್ಲಿ ಭಾರತ ಮತ್ತು ಮಲೇಷ್ಯಾ, ಸಿಂಗಪುರ, ಬ್ಯಾಂಕಾಕ್, ದುಬೈ, ಇಂಡೋನೇಷ್ಯಾ, ಕೆನಡ ಇನ್ನು ಮುಂತಾದ ದೇಶಗಳ ನಾಣ್ಯ, ನೋಟುಗಳಿವೆ.

ಈರಣ್ಣ ಬೆಂಗಾಲಿ, ರಾಯಚೂರು

